# ಹೊಳೆನರಸೀಪುರದ ಜೆ.ಎಂ.ಎಫ್.ಸಿ., ರವರ ನ್ಯಾಯಾಲಯದಲ್ಲಿ.

**<u>ಸಿ.ಸಿ.ನಂಃ 29/2015</u>**

| | | | |
|---|---|---|---|
| **ಸಾಕ್ಷಿಯ ಹೆಸರು** | ಃ ದಾಸಯ್ಯ | **ಸಿ.ಡಬ್ಲ್ಯೂ** | ಃ **2** |
| **ತಂದೆ ಹೆಸರು** | ಃ ದಾಸಯ್ಯ | **ಪಿ.ಡಬ್ಲ್ಯೂ** | ಃ **6** |
| **ವಯಸ್ಸು** | ಃ **40 ವರ್ಷ** | **ಪ್ರಮಾಣೀಕರಿಸಿದ ದಿಃ** | **30/03/2021** |
| **ವೃತ್ತಿ** | ಃ ವ್ಯವಸಾಯ | | |
| **ವಾಸ** | ಃ ಬಸವನಾಯಕನಹಳ್ಳಿ | | |

**ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ- ಮಾನ್ಯ ಎ.ಪಿ.ಪಿ ಯವರಿಂದ</u>**

ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

**<u>(ಮಾನ್ಯ ಎ.ಪಿ.ಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)</u>**

**<u>ಪಾಟೀಸವಾಲು ಃ- ಮಾನ್ಯ ಎ.ಪಿ.ಪಿ ರವರಿಂದ</u>**

ದಿಃ **25.05.2014** ರಂದು ಸಂಜೆ 7 ಗಂಟೆ ಸಮಯದಲ್ಲಿ ಚಾ.ಸಾ **1** ಮತ್ತು ನನ್ನ ಅಳಿಯ ಮೃತ ರಂಗಸ್ವಾಮಿ ಹನುಮನಹಳ್ಳಿ ಕೆರೆಯ ಹತ್ತಿರ ರಸ್ತೆ ಬದಿಯಲ್ಲಿ ನಡೆದುಕೊಂಡು ಬರುತ್ತಿದ್ದಾಗ ಕೆಎ-**13**-ಇಬಿ-**4086** ಸಂಖ್ಯೆಯ ಬೈಕಿನ ಚಾಲಕ ಹಂಗರಹಳ್ಳಿ ಕಡೆಯಿಂದ ಅತೀವೇಗ ಮತ್ತು ಅಜಾಗರೂಕತೆಯಿಂದ ಓಡಿಸಿಕೊಂಡು ಬಂದು ರಂಗಸ್ವಾಮಿಯವರಿಗೆ ಹಿಂಭಾಗದಿಂದ ಡಿಕ್ಕಿಪಡಿಸಿದ್ದು, ಅದರ ಪರಿಣಾಮವಾಗಿ ರಂಗಸ್ವಾಮಿಯವರ ತಲೆ ಮತ್ತು ಇತರೆ ಕಡೆಗಳಿಗೆ ಗಾಯಗಳಾಗಿದ್ದು, ಬೈಕ್ ಸವಾರ ನಿಲ್ಲಿಸದೇ ಹೋಗಿರುತ್ತಾರೆ ಹಾಗೂ ಗಾಯಾಳುವನ್ನು ಹೊ.ನ.ಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಅಲ್ಲಿನ ವೈದ್ಯರ ಹೇಳಿಕೆ ಮೇರೆಗೆ ಹಾಸನದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದರು. ಆ ಸಮಯದಲ್ಲಿ ಚಾ.ಸಾ **1** ರವರು ನಗೆ ಕರೆಮಾಡಿ ಅಪಘಾತದ ಬಗ್ಗೆ ತಿಳಿಸಿದ್ದರು ಎಂದರೆ ಸರಿ. ನಾನು ಹಾಸನ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದೆನು ಎಂದರೆ ಸರಿ. ನಂತರ ಹಾಸನದ ವೈದ್ಯರ ಹೇಳಿಕೆ ಮೇರೆಗೆ ಗಾಯಾಳುವನ್ನು ನಾನು ಮತ್ತು ಅವರ ಅಣ್ಣ ಯೋಗೇಶ್ ರವರು ಬೆಂಗಳೂರಿನ ನಿಮಾನ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು ಎಂದರೆ ಸರಿ. ನಂತರ ದಿನಾಂಕ **26.05.2014** ರಂದು ಸಂಜೆ **6.15** ಗಂಟೆ ಸಮಯದಲ್ಲಿ ರಂಗಸ್ವಾಮಿ ಆಸ್ಪತ್ರೆಯಲ್ಲಿ ಮೃತ ಪಟ್ಟಿರುತ್ತಾರೆ ಎಂದರೆ ಸರಿ. ನಂತರ ಶವ ಪರೀಕ್ಷೆ

ಮಾಡಲಾಗಿ ರಸ್ತೆ ಅಪಘಾತದಿಂದ ರಂಗಸ್ವಾಮಿಯವರು ಮೃತ ಪಟ್ಟಿರುವುದು ತಿಳಿದು ಬಂದಿದೆ ಎಂದರೆ ಸರಿ. ನಾನು ಈ ಮೇಲಿನಂತೆ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿ.

ಪಾಟೀ ಸವಾಲುಃ 1 ನೇ ಆರೋಪಿಯ ಪರವಾಗಿ ಶ್ರೀ ಎನ್,ಎ.ಯು. ವಕೀಲರಿಂದ

ಅಪಘಾತ ನಡೆದ ದಿನಾಂಕ ನನಗೆ ಗೊತ್ತಿಲ್ಲ. ಅಪಘಾತ ಯಾರ ತಪ್ಪಿನಿಂದ ಆಗಿದೆ ನನಗೆ ಗೊತ್ತಿಲ್ಲ. ಅಪಘಾತಪಡಿಸಿದ ಬೈಕಿನ ಸಂಖ್ಯೆ ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಹೇಳಿಕೆ ನೀಡಿದ ದಿನಾಂಕ ನನಗೆ ನೆನಪಿಲ್ಲ. ನಾನು ಠಾಣೆಗೆ ಹೋಗಿ ಪೊಲೀಸರಿಗೆ ಹೇಳಿಕೆ ನೀಡಿಲ್ಲ ಎಂದರೆ ಸರಿ. ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿ.

ಪಾಟೀ ಸವಾಲುಃ 2 ನೇ ಆರೋಪಿಯ ಪರವಾಗಿ ಶ್ರೀ ಐ.ಎಲ್.ಎಸ್. ವಕೀಲರಿಂದ

ಅಪಘಾತ ಎಷ್ಟು ಗಂಟೆಗೆ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಾನು ನೇರವಾಗಿ ಆಸ್ಪತ್ರೆಗೆ ಹೋಗಿದ್ದೆನು ಎಂದರೆ ಸರಿ. ಪೊಲೀಸರು ಸಹಿ ಹಾಕುವಂತೆ ಹೇಳಿದ ಪ್ರಕಾರ ನಾನು ಸಹಿ ಮಾಡಿದ್ದೇನೆ ಎಂದರೆ ಸರಿ.

ಮರು ವಿಚಾರಣೆ ಇಲ್ಲಃ

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ.

ಜೆ.ಎಂ.ಎಫ್.ಸಿ, ಹೊಳೆನರಸೀಪುರ.